ಹಾಗೂ ವನ್ಯ ಜೀವಿ ಅಭಯಾರಣ್ಯ ಪರಿಮಿತಿಯೊಳಗೆ ಬರುವ ಖಾಸಗಿಯವರ ಒಡೆತನದಲ್ಲಿರುವ ಜಮೀನನ್ನು ಅವರ ಸ್ವಇಚ್ಛೆಯಿಂದ ಸರ್ಕಾರಕ್ಕೆ ನೀಡುವುದಾದಲ್ಲಿ ಅದನ್ನು ಖರೀದಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಜಮೀನಿನ ಖರೀದಿಗೆ ದೊಡ್ಡ ಮೊತ್ತದ ಅನುದಾನ ಬೇಕಾಗಿರುತ್ತದೆ. ಇದಕ್ಕೆ ಭಾರತ ಸರ್ಕಾರವು ನೀಡುವ ಆರ್ಥಿಕ ಯೋಜನೆ ಅಥವಾ ಅರಣ್ಯ ಪ್ರದೇಶದ ಉಪಯೋಗಿ ಸಂಸ್ಥೆಯವರು ನೀಡುವ ಹಣದಿಂದ ಅನುವುಮಾಡಿಕೊಳ್ಳಬೇಕಾಗುತ್ತದೆ.

ಈ) ಯೋಜನೆಯ ಬಗ್ಗೆ ಯಾವುದೇ ಅಂತಿಮ ನಿರ್ಧಾರ ಕೈಗೊಂಡಿರುವುದಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ ಮತ್ತು ಊ) ಶರಾವತಿ ವನ್ಯ ಜೀವಿ ಉಪ ವಿಭಾಗದಲ್ಲಿನ 43123.00 ಹೆ. ಪ್ರದೇಶವನ್ನು ಸರ್ಕಾರಿ ಆದೇಶ ಸಂ: ಎಎಫ್‌ಡಿ 22 ಎಫ್‌ಡಬ್ಲೂಎಲ್ 74, ದಿನಾಂಕ: 27–06–1974ರಂತೆ ಶರಾವತಿ ಅಭಯಾರಣ್ಯವೆಂದು ಉದ್ಘೋಷಣೆ ಮಾಡಲಾಗಿದೆ. ಈ ಪ್ರದೇಶದಲ್ಲಿ ಸುಮಾರು 1691 ಕುಟುಂಬಗಳು ವಾಸವಾಗಿರುತ್ತಾರೆ.

ಋ) ಈ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕಾಗಿ ಇನ್ನೂ ಯಾವುದೇ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವುದಿಲ್ಲ ಅಥವಾ ಗುರಿ ನಿಗಧಿಪಡಿಸಿರುವುದಿಲ್ಲ. ಯೋಜನೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ಮುಂದಿನ ಕ್ರಮಕ್ಕೆ ಸಲ್ಲಿಸುವ ಮೊದಲು ಆಳವಾದ ಪರಿಶೀಲನೆ ಹಾಗೂ ಚರ್ಚೆಯ ಅವಶ್ಯಕತೆ ಇದೆ.

ಋೂ) ಸದರಿ ವಿಷಯದಲ್ಲಿ ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳುವ ಮೊದಲು ಜನಪ್ರತಿನಿಧಿಗಳೊಂದಿಗೆ ಮತ್ತು ಸಂಬಂಧಪಟ್ಟ ರೈತರೊಂದಿಗೆ ಚರ್ಚಿಸಲಾಗುವುದು.

735(979) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯಗಳಲ್ಲಿ ಹಳೇ ಮರಗಳು ಬಿದ್ದು, ಉಪಯೋಗಕ್ಕೆ ಬಾರದೆ ರಾಷ್ಟ್ರೀಯ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಸದರಿ ಮರಗಳು ಕುಸಿದು ಬಿದ್ದು ಹಾಳಾಗುವ ಮೊದಲೇ ಅವುಗಳನ್ನು ಪತ್ತೆಮಾಡಿ, ಕಾಲಮಿತಿ ಅವಧಿಯೊಳಗೆ ಸುಧಾರಣೆ ದರದಲ್ಲಿ ಬಡವರಿಗೆ ಮನೆ ಕಟ್ಟಿಕೊಳ್ಳಲು ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ.

ಇ) ಇದರ ಬಗ್ಗೆ ಸರ್ಕಾರದ ನಿಲುವೇನು.

ಈ) ಈ ವ್ಯವಸ್ಥೆಯನ್ನು ಕೊಡಲೇ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ.

ಉ) ಇದ್ದಲ್ಲಿ ಯಾವಾಗ ತರಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯದಲ್ಲಿ ಸತ್ತು ಬಿದ್ದ ಬೆಲೆ ಬಾಳುವ ಮರಗಳನ್ನು ಡಿಪೋಗಳಿಗೆ ತಂದು ವಿಲೇ ಮಾಡಲಾಗುತ್ತದೆ.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಭಾರತ ಸರ್ಕಾರದಿಂದ ಅನುಮೋದಿಸಲಾದ ಕಾರ್ಯ ಯೋಜನೆಯ ಅನುಸಾರ ಅರಣ್ಯದಲಿ ಬಿದ್ದ ಮರಗಳನ್ನು ತೆಗೆಯಬಹುದಾಗಿದೆ.

ಮರಮಟ್ಟುಗಳನ್ನು ಸರ್ಕಾರಿ ನಾಟಾ ಡಿಪೋವಿಗೆ ಸಾಗಿಸಿ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲಾಗುತ್ತದೆ.

ಅದಲ್ಲದೆ ಮರಗಳನ್ನು ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಜನರಿಗೆ ಸ್ವಂತ ಬಳಕೆಗೆ ಮಂಜೂರು ಮಾಡಲು ಅವಕಾಶವಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

736(980) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂಭಾಪುರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ-ಸಕ್ರಮ ಜಮೀನುಗಳಿಗೆ ಸಂಬಂಧಿಸಿದಂತೆ, ಅಕ್ರಮ ಜಮೀನು ಸಕ್ರಮೀಕರಣಗೊಳಿಸಲು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯ ಕೇಳಿದ ಕಡತಗಳಿಗೆ ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಅಕ್ರಮ-ಜಮೀನು ಸಕ್ರಮೀಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಕಡತಗಳು ಅರಣ್ಯ ಇಲಾಖೆಗೆ ಬಂದಿರುತ್ತವೆ.

ಇ) ಸದರಿ ಕಡತಗಳಲ್ಲಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ಅರ್ಜಿದಾರರಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಅಭಿಪ್ರಾಯ ನೀಡಲು ಕಾಲಮಿತಿ ನಿಗಧಿಗೊಳಿಸಿ ನಿರ್ದೇಶನ ನೀಡುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯ ಇಲಾಖೆಯಿಂದ ವಿಳಂಬ ಧೋರಣೆ ಆಗಿರುವುದಿಲ್ಲ.

ಆ) ಅಕ್ರಮ ಜಮೀನು ಸಕ್ರಮೀಕರಣಕ್ಕೆ ಒಟ್ಟು 652 ಕಡತಗಳು ಇಲಾಖೆಗೆ ಬಂದಿರುತ್ತವೆ.

ಇ) ಒಟ್ಟು 1241 ಫಲಾನುಭವಿಗಳು ಇರುತ್ತಾರೆ.

ಈ) ಅಭಿಪ್ರಾಯ ನೀಡುವಲ್ಲಿ ಯಾವುದೇ ವಿಳಂಬ ಉಂಟಾಗಿರುವುದಿಲ್ಲ.

738(982) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಎಂದರೇನು ಹಾಗೂ ಹಕ್ಕು ಮಂಜೂರು ಮಾಡುವ ಮಾನದಂಡ ಯಾವುದು;

ಆ) ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು;

ಇ) 1964ನೇ ಇಸವಿಯವರೆಗೆ ಕುಮ್ಕಿ ಹಕ್ಕುಗಳನ್ನು ರೆಗ್ಯೂಲರೈಸ್ ಮಾಡಿದ್ದು, ಅನಂತರ ರೆಗ್ಯೂಲರೈಸ್ ಮಾಡದಿರಲು ಕಾರಣವೇನು;